# ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ  ಎಫ್.  ಸಿ ನ್ಯಾಯಾಲಯ

# ಹಿರೇಕೆರೂರು

ಸಿ.ಸಿ. ನಂಃ 1054/2021

**ಪಿ.ಡಬ್ಲ್ಯೂಃ 7**

ಸಿ.ಡಬ್ಲ್ಯೂಃ 11

ಸಾಕ್ಷಿದಾರರ ಹೆಸರುಃ – ಏಕೇಶಪ್ಪ

ತಂದೆ ಹೆಸರು – ಬಸಪ್ಪ ದೊಣ್ಣೇರ

ವಯಸ್ಸುಃ – 63 ವರ್ಷ

ಉದ್ಯೋಗ – ವ್ಯವಸಾಯ

ವಾಸಸ್ಥಳ – ದೂದಿಹಳ್ಳಿ

ದಿನಾಂಕಃ 10-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ – ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿದ್ದೇನೆ. ಮಲ್ಲನಗೌಡ ನಮ್ಮ ಗ್ರಾಮದವರು.

2. ದಿಃ 09-04-2021 ರಂದು ಬೆಳಿಗ್ಗೆ 5-00 ಗಂಟೆಗೆ ನಾನು ಹೊಲಕ್ಕೆ ಹೋಗಿದ್ದೆ. ಅಲ್ಲಿ ಹಳ್ಳದ ಹತ್ತಿರ ಚೀರಾಡಿದರು, ನಾನು ಅಲ್ಲಿಗೆ ಹೋದೆ ಮಲ್ಲನಗೌಡ, ರವಿ, ಶಿವಾನಂದ ಅವರಿದ್ದರು. ಅಲ್ಲಿ ಲಾರಿ ಹೊಡೆದು ಹೆಣ ಬಿದ್ದಿತ್ತು. ಆಗ 6-00 ಗಂಟೆ ಆಗಿರಬಹುದು. ಅಲ್ಲಿ ರಕ್ತ ಆಗಿತ್ತು, ಹೇಮಪ್ಪ ಹುಲ್ಲತ್ತಿ ಅವರಿಗೆ ರಕ್ತ ಆಗಿತ್ತು, ಆತನು ಆಗಲೇ ಸತ್ತಿದ್ದ, ಅಲ್ಲಿಗೆ ಆತನ ಮಗ ಬಂದ. ಲಾರಿಯ ಹೆಸರು ಹೇಳಲು ಬರುವುದಿಲ್ಲ. ಮುಂದೆ ಮೃತನ ಶವವನ್ನು ಹಿರೇಕೆರೂರು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಇದೆಲ್ಲವನ್ನು ಪೋಲಿಸರಿಗೆ ಹೇಳಿದ್ದೇನೆ. ಲಾರಿಯ ತಪ್ಪಿನಿಂದ ಅಪಘಾತವಾಗಿದೆ ಎಂದು ತಿಳಿದು ಬಂತು. ಆ ಲಾರಿಯನ್ನು ನೋಡಿದರೆ ನೆನಪು ಆಗುವುದಿಲ್ಲ. ಸಾಕ್ಷಿಗೆ ನಿಪಿ-13 ಪೋಟೋವನ್ನು ತೋರಿಸಿದಾಗ ಬಹಳ ದಿನಗಳಾಗಿವೆ ಹೇಗೆ ಹೇಳಲಿ ಎಂದು ಉತ್ತರಿಸಿದ್ದಾರೆ.

## ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಹೆಚ್ ಪಿ ವಕೀಲರಿಂದಃ

ಹಿರೇಕೆರೂರು- ಮಾಸೂರು ರಸ್ತೆ ಜೋಡಿ ರಸ್ತೆ ಎಂದರೆ ಸರಿ. ಅಲ್ಲಿ ಬಹಳ ವಾಹನಗಳು ಓಡಾಡುತ್ತವೆಂದರೆ ಸರಿ. ಆ ರಸ್ತೆಯಲ್ಲಿ ತಿರುವು ಇದ್ದು, ಬಹಳಷ್ಟು ಗಿಡಗಳು ಬೆಳೆದಿವೆ ಎಂದರೆ ಸರಿ. ಎಪ್ರಿಲ್ ತಿಂಗಳಲ್ಲಿ ಬೆಳಗಿನ ಜಾವ ಇಬ್ಬನಿ ಬೀಳುತ್ತದೆ ಎಂದರೆ, ಇಬ್ಬನಿ ಬಿದ್ದಿತ್ತು. ಅಲ್ಲಿ ರಸ್ತೆ ತಿರುವು ಇದ್ದಿದ್ದರಿಂದ ವಾಹನಗಳು ನಿಧಾನವಾಗಿ ಹೋಗುತ್ತವೆಂದರೆ ಸರಿ. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ. ನಾನು ಠಾಣೆಗೆ ಹೋಗಿದ್ದೇನೆ, ಹೇಳಿಕೆ ನೀಡಿದ್ದೇನೆ. ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲವೆಂದರೆ ಸರಿಯಲ್ಲ. ಆರೋಪಿಗೂ ಘಟನೆಗೂ ಸಂಬಂಧವಿಲ್ಲದಿದ್ದರು ಸಹ ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ.

## ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 10-08-2026.

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,

ಹಿರೇಕೆರೂರು